ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 172/2025

ಸಿ ಡಬ್ಲ್ಯೂ-2

ಪಿ ಡಬ್ಲ್ಯೂ-2

ದಿಃ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಮಂಜುನಾಥ ನಾಯ್ಕ |
| ತಂದೆಯ ಹೆಸರುಃ | ಕೃಷ್ಣಾ ನಾಯ್ಕ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ವ್ಯವಹಾರ |
| ವಿಳಾಸಃ | ಅವರ್ಸಾ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-3 ರವರ ಪರಿಚಯವಿರುವುದಿಲ್ಲ. ನಾನು ಅವರನ್ನು ನೋಡಿರುವುದಿಲ್ಲ, ಗುರುತಿಸುವುದಿಲ್ಲ. ಚಾಸಾ-1 ರವರ ಪರಿಚಯವಿರುವುದಿಲ್ಲ. ಆರೋಪಿಯ ಪರಿಚಯವಿರುವುದಿಲ್ಲ. ಮೃತ ಗೇಣು ಶೇಷು ನಾಯ್ಕ ಇವರ ಪರಿಚಯವಿರುವುದಿಲ್ಲ. ನಾನು ಅವರ್ಸಾದಲ್ಲಿ ವಾಸ ಮಾಡುತ್ತಿದ್ದು, ಹಟ್ಟಿನಹಕ್ಕಲ್ ನೆದ್ದರಲ್ಲಿ ಮಾಡುತ್ತಿಲ್ಲ. ಸಾಕ್ಷಿಗೆ ಒಂದುದಾಖಲೆ ತೋರಿಸಲಾಗಿ, ಸದರಿ ದಾಖಲೆ ಅಪಘಾತಸ್ಥಳದ ಪಂಚನಾಮೆಯಾಗಿದ್ದು, ಅದರ ಮೇಲಿರುವ ಸಾಕ್ಷಿಯು ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-4 ಮತ್ತು ಸಾಕ್ಷಿ ಸಹಿಯನ್ನು ನಿಪಿ-4ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಂಕೋಲಾ ಪೊಲೀಸ್ ಠಾಣೆಗೆ ಬಂದಾಗ

ಪಡೆದಿರುತ್ತಾರೆ. ಸುಮಾರು ಒಂದು ವರ್ಷದ ಹಿಂದೆ ಮಾಡಿರಬಹುದು. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿರುವುದಿಲ್ಲ, ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ. ಸುಮಾರು 3 ಸಹಿಗಳನ್ನು ಮಾಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನು ತೋರಿಸಲಾಗಿ, ಸದರಿ ದಾಖಲೆ ಕಚ್ಚಾ ನಕಾಶೆಯಾಗಿದ್ದು, ಅದರ ಮೇಲಿರುವ ಸಾಕ್ಷಿಯು ಸಹಿಯನ್ನು ಗುರುತಿಸಿದ್ದು, ನಕಾಶೆಯನ್ನು ನಿಪಿ-5 ಮತ್ತು ಸಾಕ್ಷಿ ಸಹಿಯನ್ನು ನಿಪಿ-5ಎ ಎಂದು ಗುರುತಿಸಲಾಯಿತು. ಅದರಲ್ಲಿ ಏನು ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಯಾವ ವಿಷಯಕ್ಕಾಗಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ, ಅದೇದಿನ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಸಾಕ್ಷಿಯು 2 ಪೊಟೋಗಳಲ್ಲಿ ತಾವು ಇರುವುದನ್ನು ಗುರುತಿಸಿದ್ದು, ಸದರಿ ಪೊಟೋಗಳನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಸದರಿ ಪೊಟೋಗಳನ್ನು ನಾನು ಅಂಕೋಲಾದ ಬಾಳೆಗುಳಿ ಹತ್ತಿರ ಬರುವಾಗ ಪೊಲೀಸರು ಪಡೆದುಕೊಂಡಿರುತ್ತಾರೆ. ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದುಕೊಂಡಿರುತ್ತಾರೆ ಎಂದು ನಾನು ವಿಚಾರಣೆ ಮಾಡಿದ್ದಾಗಲಿ ಅಥವಾ ಪೊಲೀಸರು ನನಗೆ ತಿಳಿಸಿದ್ದಾಗಲಿ ಇರುವುದಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ, ಸದರಿ ದಾಖಲೆ ನೋಟೀಸು ಆಗಿದ್ದು, ಅದರ ಮೇಲಿರುವ ಸಾಕ್ಷಿಯು ಸಹಿಯನ್ನು ಗುರುತಿಸಿದ್ದು, ನೋಟೀಸನ್ನು ನಿಪಿ-8 ಮತ್ತು ಸಾಕ್ಷಿ ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅದೇ ದಿನ ಪೊಲೀಸ್ ಠಾಣೆಯ ತೆಗೆದುಕೊಂಡಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ಒಟ್ಟು 3 ಸಹಿಗಳನ್ನು ಮಾಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ, ಸದರಿ ದಾಖಲೆ ವಾಹನ ಪಂಚನಾಮೆಯಾಗಿದ್ದು, ಅದರ ಮೇಲಿರುವ

ಸಾಕ್ಷಿಯು ಸಹಿಯನ್ನು ಗುರುತಿಸಿದ್ದು, ವಾಹನ ಪಂಚನಾಮೆಯನ್ನು ನಿಪಿ-9 ಮತ್ತು ಸಾಕ್ಷಿ ಸಹಿಯನ್ನು ನಿಪಿ-9ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಒಂದು ವರ್ಷದ ಹಿಂದೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಮೋಟರ್ ಸೈಕಲನ್ನು ತೋರಿಸಿದ್ದಾಗಲಿ ಅಥವಾ ಜಪ್ತಿ ಮಾಡಿಕೊಂಡಿದ್ದಾಗಲಿ ಇರುವುದಿಲ್ಲ. ಸಾಕ್ಷಿಯು 2 ಪೊಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಪೊಟೋಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಪೊಲೀಸ್ ಠಾಣೆಯಲ್ಲೇ ತೆಗೆದುಕೊಂಡಿರುತ್ತಾರೆ. ಒಂದು ವರ್ಷದ ಹಿಂದೆ ಸಹಿ ಮಾಡಲು ಹೋದಾಗ ಸದರಿ ಪೊಟೋಗಳನ್ನು ತಗೆದಿದ್ದು, ಯಾವ ವಿಷಯಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ, ಸದರಿ ದಾಖಲೆ ಪಂಚರಿಗೆ ಕೊಟ್ಟ ನೋಟೀಸ್ ಆಗಿದ್ದು, ಅದರ ಮೇಲಿರುವ ಸಾಕ್ಷಿಯು ಸಹಿಯನ್ನು ಗುರುತಿಸಿದ್ದು, ನೋಟೀಸನ್ನು ನಿಪಿ-12 ಮತ್ತು ಸಾಕ್ಷಿ ಸಹಿಯನ್ನು ನಿಪಿ-12ಎ ಎಂದು ಗುರುತಿಸಲಾಯಿತು. ನನ್ನನ್ನು ಅಪಘಾತಕ್ಕೆ ಸಂಬಂಧಪಟ್ಟು ಪಂಚರಾಗಿ ಬರಮಾಡಿಕೊಂಡು ಸಹಿ ಪಡೆದುಕೊಂಡಿದ್ದು ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ನೀವು ಎಲ್ಲಿಯವರೆಗೆ ಓದಿರುತ್ತೀರಿ ಎಂದರೆ ಸಾಕ್ಷಿಯು 8ನೇ ತರಗತಿಯವರೆಗೆ ಓದಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ಕನ್ನಡ ಓದಲು ಹಾಗೂ ಬರೆಯಲು ಸ್ಪಷ್ಟವಾಗಿ ಬರುತ್ತದೆ ಎಂದರೆ ಸರಿ. ನಿಮಗೆ ಸಾಮಾನ್ಯ ಜ್ಞಾನ ಇದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಖಾಲಿ ಹಾಳೆಗೆ ಸಹಿ ಮಾಡುವುದು ಕಾನೂನು ಬದ್ಧನಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಪೊಲೀಸ್ ಠಾಣೆಯಲ್ಲಿ ಖಾಲಿ ಹಾಳೆಯ ಮೇಲೆ ಸಹಿ ಮಾಡಿರುವುದಿಲ್ಲ, ಅದರಲ್ಲಿ ಬರೆಯಲಾಗಿತ್ತು ಎಂದರೆ ಸರಿಯಲ್ಲ. ನೀವು ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಠಾಣೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ವೈಯಕ್ತಿಕ ಕೆಲಸಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸರು ನಿಮಗೆ ಪಂಚರಾಗಿ ಬರಲು ನೋಟೀಸನ್ನು ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-8 ನಿಮಗೆ ಕೊಟ್ಟ ನೋಟೀಸು ಎಂದರೆ ಸರಿಯಲ್ಲ.

3. ದಿಃ30-06-2024 ರಂದು ಚಾಸಾ-7 ರವರು ಘಟನಾ ಸ್ಥಳವಾದ ಅಂಕೋಲಾದ ಹಟ್ಟಿಕೇರಿ ಗ್ರಾಮದ ಚತುಷ್ಪತ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತವಾಗಿದ್ದು, ಸದರಿ ಸ್ಥಳವನ್ನು ತೋರಿಸಿದಂತೆ ನಿಮ್ಮ ಮತ್ತು ಚಾಸಾ-3 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 12.30 ಗಂಟೆಯವರೆಗೆ ಪಂಚನಾಮೆಯನ್ನು ತಯಾರಿಸಿ, ನಿಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಂದರ್ಭದಲ್ಲಿ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿ ನಿಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯ ಸಂದರ್ಭದಲ್ಲಿ ಘಟನಾ

ಸ್ಥಳದಲ್ಲಿ ನಿಪಿ-6 ಮತ್ತು 7 ರಂತೆ ಫೋಟೊಗಳನ್ನು ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ30-06-2024 ರಂದು ಅಪಘಾತಪಡಿಸಿದ ಹೀರೋ ಹೊಂಡಾ ಕಂಪನಿಯ ಸಿಡಿ 100 ಮೋಟರ್ ಸೈಕಲ್ ನಂ. ಕೆ ಎ 30 ಜೆ 2356 ವಾಹನವನ್ನು ನಿಮ್ಮ ಹಾಗೂ ಚಾಸಾ-3 ರವರ ಸಮಕ್ಷಮ ಅಪಘಾತವನ್ನು ನೋಡಿದ ಪ್ರತ್ಯೇಕ್ಷದರ್ಶಿಯಾದ ಚಾಸಾ-7 ರವರು ನೀಡಿದ ಮಾಹಿತಿಯ ಮೇರೆಗೆ ಅಪಘಾತಪಡಿಸಿದ ವಾಹನವನ್ನು ನೋಡಿ ಗುರುತಿಸಿ, ಸದರಿ ವಾಹನವನ್ನು ವಶಕ್ಕೆ ಪಡೆದುಕೊಂಡ ಬಗ್ಗೆ ಪಂಚನಾಮೆಯನ್ನು ತಯಾರಿಸಿ, ನಿಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ವಶಪಡಿಸಿಕೊಂಡಿದ್ದು ಇರುವುದಿಲ್ಲ. ಸದರಿ ಪಂಚನಾಮೆಯ ಸಂದರ್ಭದಲ್ಲಿ ನಿಪಿ-10 ಮತ್ತು 11 ಫೊಟೊಗಳನ್ನು ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-4,5 ಮತ್ತು 9 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ಸ್ಪಷ್ಟ ಹಾಗೂ ಸಂಪೂರ್ಣ ಮಾಹಿತಿ ಇದ್ದರೂ, ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆರೋಪಿ, ಚಾಸಾ-1,3 ಹಾಗೂ ಮೃತ ಗೇಣು ಶೇಶು ನಾಯ್ಕ ಇವರ ಪರಿಚಯವಿದ್ದರೂ, ಪರಿಚಯವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-1,3 ಮತ್ತು ಆರೋಪಿತರು ಅಕ್ಕಪಕ್ಕದ ಊರಿನವರು ಎಂದರೆ ನನಗೆ ಗೊತ್ತಿರುವುದಿಲ್ಲ. ಮಾವಿನಕೇರಿ, ಹಟ್ಟಿನಹಕ್ಕಲು, ಸಕಲಬೇಣ ಇವುಗಳು ಎಲ್ಲ ಅವರ್ಸಾ ತಾಲೂಕಿನ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತವೆ ಎಂದರೆ ಸರಿ. ಇವೆಲ್ಲ ಅಕ್ಕಪಕ್ಕದ ಊರುಗಳು ಎಂದರೆ ದೂರು ಆಗುತ್ತವೆ ಎಂದು ನುಡಿಯುತ್ತಾರೆ. ನೀವು ಇದೇ ಪ್ರಥಮವಾಗಿ, ನೇರವಾಗಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಕೊಡುತ್ತಿದ್ದೀರಿ ಎಂದರೆ ಸರಿ. ಆರೋಪಿತ

ಹಾಗೂ ಫಿರ್ಯಾದಿಯವರು ರಾಜಿ ಮಾಡಿಕೊಂಡು ನಿಮ್ಮನ್ನು ಸಾಕ್ಷಿ ಮಾಡಿಸಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಪರಿಚಯವಿದ್ದರೂ ಸಹ, ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಪಂಚನಾಮೆಯ ಸಂಪೂರ್ಣ ಮಾಹಿತಿ ಇದ್ದರೂ ಹಾಗೂ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನೀವು ಪಂಚನಾಮೆಗೆ ಹೋಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ಸಂಗನಮತ ಮಾಡಿಕೊಂಡು, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಇಂದು ಚಾಸಾ–3 ರವರ ಜೊತೆಗೆ ನ್ಯಾಯಾಲಯಕ್ಕೆ ಬಂದಿದ್ದು, ಅವರ ಪರಿಚಯವಿರು ತ್ತದೆ ಎಂದರೆ ಸರಿಯಲ್ಲ. ಪೊಲೀಸರು ಪಂಚನಾಮೆಗೆ ಬರಲು ನಿಮಗೆ ನೋಟೀಸ್ ಕೊಟ್ಟಿದ್ದರೂ ಸಹ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಪಂಚನಾಮೆಯನ್ನು ಘಟನಾ ಸ್ಥಳದಲ್ಲೇ ಮಾಡಿದ್ದರೂ ಸಹ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ 3 ಸಹಿಗಳನ್ನು ಮಾಡಿದ್ದು, ಸತ್ಯ ಇದ್ದು, ಉಳಿದ ಸಹಿಗಳನ್ನು ಘಟನಾ ಸ್ಥಳದಲ್ಲಿ ಪಂಚನಾಮೆಯ ಸಂದರ್ಭದಲ್ಲಿ ಮಾಡಿದ ಸಹಿಗಳು ಆಗಿರುತ್ತವೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.